ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 84/2024**

**ಪ್ರಾಸಾ- 2 ಚಾಸಾ- 2**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶಮೀಲ್ ಪಾಷ |
| ತಂದೆಯ ಹೆಸರುಃ | : | ಸೈಯದ್ ಅನ್ವರ್ ಪಾಷ |
| ವಯಸ್ಸುಃ | : | 40 ವರ್ಷ |
| ಉದ್ಯೋಗಃ | : | ಚಾಲಕ |
| ವಾಸ | : | ಹೊಳೆನರಸೀಪುರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:16-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಆರೋಪಿತರು ಹಾಗೂ ವಿಸಿ ಮುಂದೆ ಹಾಜರಿರುವ ಆರೋಪಿ ಸುಮಂತ್ ರವರ ಪರಿಚಯವಿಲ್ಲ. ನಾನು ದನದ ವ್ಯಾಪಾರ ಮಾಡುತ್ತೇನೆ. ಕೆಎ-13-ಸಿ-8446ರ ಮಾಲೀಕ ನಾನೇ. ಅದರಲ್ಲಿ ಚಾಸಾ-1ರವರು ದನ ತುಂಬಿಸಿಕೊಂಡು ಹೋಗುವಾಗ ಆರೋಪಿತರು ಬಂದು ಯಾವುದೇ ಗಲಾಟೆ ಮಾಡಿಲ್ಲ. ಚಾಸಾ-1ರವರು ನನ್ನನ್ನು ಫೋನ್ ಮಾಡಿ ಕರೆಸಿಕೊಂಡಿಲ್ಲ. ಆರೋಪಿತರು ಮಚ್ಚುಕತ್ತಿಯಿಂದ ಹಲ್ಲೆ ಮಾಡಿ ನನ್ನ 35ಸಾವಿರ ರೂಪಾಯಿ ಹಣವನ್ನು ಮತ್ತು ಉಂಗುರವನ್ನು ಕಿತ್ತುಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 7-6-22ರಂದು ಬೆಳಿಗ್ಗೆ 7ವರೆ ಗಂಟೆಗೆ ನಾನು ಹಾಸನ ಸಂತೆಯಲ್ಲಿ ದನಗಳನ್ನು

ಖರೀದಿಸಿ ಕೆಲವು ದನಕರುಗಳನ್ನು ಮಾರಾಟ ಮಾಡಿ ಉಳಿದ 7 ಕರುಗಳನ್ನು ಗೂಡ್ಸ್ ವಾಹನ ಸಂಖ್ಯೆ ಕೆಎ-13-ಸಿ-8446ರ ರಲ್ಲಿ ಚಾಸಾ-1ರವರ ಮೂಲಕ ಕಳುಹಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸುಮಾರು 8 ಗಂಟೆ ಸಮಯಕ್ಕೆ ಫೋನ್ ಮಾಡಿ ಯಾರೋ ಹುಡುಗರು ತಣ್ಣೀರುಹಳ್ಳದ ಬಳಿ ವಾಹನವನ್ನು ಅಡ್ಡಗಟ್ಟಿ ದ್ದಾರೆ ಎಂದು ತಿಳಿಸಿದ ಆಗ ಅವರು ನನಗೆ ಫೋನ್ ಮಾಡಿದರು ಎಂದರೆ ಸರಿಯಲ್ಲ. ನಾನು ಅಲ್ಲಿಗೆ ಹೋದಾಗ ಅಲ್ಲಿ ಸುಮಾರು 4-5ಜನ ಇದ್ದು ಅವರೆಲ್ಲರೂ ನನಗೆ ಹಲ್ಲೆ ಮಾಡಿದರು ಮತ್ತು ಒಬ್ಬ ಮಚ್ಚಿನ ಹಿಂಬದಿಯಿಂದ ನನ್ನ ಎಡಕೈಗೆ ಕಾಲಿಗೆ ಸೊಂಟಕ್ಕೆ ಹೊಡೆದು 2 ಲಕ್ಷ ಕೊಡದಿದ್ದರೆ ನಿಮ್ಮಿಬ್ಬರನ್ನು ಇಲ್ಲೇ ಕೊಲೆ ಮಾಡುತ್ತೇವೆಂದು ಹೆದರಿಸಿದರು ನಂತರ ನನ್ನ ಹತ್ತಿರ ಹಣವಿಲ್ಲ ಬಿಟ್ಟು ಬಿಡಿ ಎಂದು ಹೇಳಿದಾಗ ಅವರಲ್ಲಿ ಓರ್ವ ವ್ಯಕ್ತಿ ನನ್ನ ಜೇಬಿನಲ್ಲಿದ್ದ 35ಸಾವಿರ ರೂಪಾಯನ್ನು ಕಿತ್ತುಕೊಂಡರು ಮತ್ತು ಕರುಗಳನ್ನೆಲ್ಲ ಬಿಚ್ಚಿ ಓಡಿಸಿ ಪೊಲೀಸ್ಕೇಸು ಹಾಕಿದರೆ ಸುಮ್ಮನೆ ಬಿಡುವುದಿಲ್ಲ ಎಂದು ಹೆದರಿಸಿ ಆಟೋ ಮತ್ತು ಬೈಕಿನಲ್ಲಿ ಹೋದರು ಎಂದರೆ ಸರಿಯಲ್ಲ. ಸದರಿ ಆಟೋ ನಂಬರ್ ಕೆಎ-06-9706 ಎಂದರೆ ಸರಿಯಲ್ಲ. ನಂತರ ನನ್ನನ್ನು ಚಾಸಾ-1ರವರು ಆಸ್ಪತ್ರೆಗೆ ಕರೆದುಕೊಂಡು ಹೋದರು ಮತ್ತು ಘಟನೆಯ ಬಗ್ಗೆ ಮಾಲೀಕರಿಗೆ ವಿಚಾರ ತಿಳಿಸಿದರು ಎಂದು ತಿಳಿಯಿತು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಹೋಗಿ ನಂತರ 11-6-22ರಂದು ಆರೋಪಿತರ ಪೈಕಿ 4 ಜನರನ್ನು ಪೊಲೀಸರು ಬಂಧಿಸಿದ್ದಾರೆಂದು ಚಾಸಾ-1ರವರು ತಿಳಿಸಿ ಠಾಣೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ 4 ಜನ ಆಸಾಮಿಗಳಿದ್ದು ಅವರಲ್ಲಿ ನನಗೆ ಹಲ್ಲೆ ಮಾಡಿ ನನ್ನಿಂದ ಹಣ ಕಿತ್ತುಕೊಂಡವರೂ ಕೂಡ ಇದ್ದರು ಎಂದರೆ ಸರಿಯಲ್ಲ. ಅವರು ಈ ದಿವಸ ನ್ಯಾಯಾಲಯದ ಮುಂದಿ ರುವ 4, 6, 7 ಮತ್ತು ವಿಸಿ ಮೂಲಕ ನೋಡಿದ 5ನೇ ಆರೋಪಿತರು ಎಂದರೆ ಸರಿಯಲ್ಲ. ಉಳಿದ 3 ಜನರು ತಲೆಮರೆಸಿಕೊಂಡಿದ್ದಾರೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ಅವರ ಹೆಸರು ಇಮ್ರಾನ್ ವಾಸಿಮ್, ಸಿಂಚನ್ ಮತ್ತು ಅಕ್ಷಯ್ ಎಂದು ತಿಳಿಯಿತು ಎಂದರೆ ಸರಿಯಲ್ಲ. ಅವರು ಈ ದಿವಸ ನ್ಯಾಯಾಲಯದ ಮುಂದಿರುವ 1 ರಿಂದ 3ನೇ ಆರೋಪಿತರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು.

3.ದಿನಾಂಕ 15-6-22ರಂದು ಮತ್ತೊಮ್ಮೆ ಪೊಲೀಸರು ನನ್ನನ್ನು ಕರೆಸಿ ಅಲ್ಲಿ ಇಮ್ರಾನ್ ವಸೀಮ್ ಅಲಿಯಾಸ್ ವಸೀಮ್ ಪಾಷ ಎಂಬುವವರನ್ನು ದಸ್ತಗಿರಿ ಮಾಡಿದರು, ಅವರನ್ನು ನಾನು ಆ ದಿವಸ ನನ್ನ ಜೇಬಿನಿಂದ ಹಣ ತೆಗೆದುಕೊಂಡವೆಂದು ಗುರುತಿಸಿ ಈಗ ಓದಿ ಹೇಳಿದಂತೆ ಹೇಳಿಕ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು.

4.ದಿನಾಂಕ 19-6-22ರಂದು ಪೊಲೀಸರು ನನ್ನನ್ನು ಕರೆಸಿ ಅಲ್ಲಿ ಸಿಂಚನ್ ಅಲಿಯಾಸ್ ಸಿಂಚು ಎಂಬುವವರನ್ನು ದಸ್ತಗಿರಿ ಮಾಡಿದರು, ಅವರನ್ನು ನಾನು ಕೃತ್ಯದ ದಿವಸ ನನಗೆ ಮೈಕೈಗೆ ಹಲ್ಲೆ ಮಾಡಿದ್ದವರೆಂದು ಗುರುತಿಸಿ ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಕೇಸಿನ ವಿಷಯ ಗೊತ್ತಿದ್ದೂ್ದ ಆರೋಪಿತರು ಕೃತ್ಯ ನಡೆಸಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ನ್ಯಾಯಾಲಯದಿಂದ ಹೊರಗುಳಿದಿರುವುದರಿಂದ ಹಾಜರಿರುವ ಆರೋಪಿತರಿಗೆ ಪಾಟೀಸವಾಲು ಮಾಡುತ್ತೀರಾ ಎಂದು ಕೇಳಿದಾಗ ಇಲ್ಲ ಎಂದು ನುಡಿದಿರುತ್ತಾರೆ, ಪಾಟೀಸವಾಲಿಗೆ ಕಾಲಾವಕಾಶ ನೀಡಲು ಸಕಾರಣ ಕಂಡುಬಾರದಿರುವುದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಗಿದೆ.)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**